Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 12-12-2020



Edit with WPS Office

# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

Edit with WPS Office

ಪ್ರಜಾವಾಣಿ

# ಹೊಸ ವರ್ಷ: ಬಹಿರಂಗ ಕಾರ್ಯಕ್ರಮ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ಪ್ರಯುಕ್ತ ಸಾರ್ವಜನಿಕವಾಗಿ ಕಾರ್ಯಕ್ರಮ ಆಯೋಜಿಸುವುದನ್ನು ನಿಷೇಧಿಸಲು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಿರ್ಧರಿಸಲಾ-

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಬೆಂಗಳೂರಿನಲ್ಲಿ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಷೇಧಿಸುವ ಕುರಿತು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ಯಾವ ಪ್ರದೇಶದಲ್ಲೂ

ಡಿಸೆಂಬರ್ 20ರಿಂದ ಜನವರಿ 2ರವರೆಗೆ ಬಹಿರಂಗ ಕಾರ್ಯಕ್ರಮಗಳನ್ನು ನಿಷೇಧಿಸುವ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ಸದ್ಯವೇ ಉನ್ನತ ಮಟ್ಟದ ಸಭೆ ನಡೆಯಲಿದೆ. ರಾಜ್ಯದಾದ್ಯಂತ

ವುದು ಎಂದು ಹೇಳಿದರು.

ಜನರು ತಮ್ಮ ಮನೆಗಳಲ್ಲೇ ಹೊಸ ವರ್ಷಾಚರಣೆ ನಡೆಸಬಹುದು. ಯಾವುದೇ ರೀತಿಯ ಸಾರ್ವಜನಿಕ ಕಾರ್ಯಕ್ರಮಗಳಿಗೆ ಪರವಾನಗಿ ನೀಡದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಗಿದೆ ಎಂದರು.

Edit with WPS Office

ಪ್ರಜಾವಾಣಿ

# ಹೊಸ ವರ್ಷ: ಬಹಿರಂಗ ಕಾರ್ಯಕ್ರಮ ನಿಷೇಧ

ಒಂದನೇ ಪುಟದಿಂದ...

ಹೋಟೆಲ್, ಪಬ್, ರೆಸ್ಟೋರೆಂಟ್‌ಗಳಲ್ಲಿ ನೂರಾರು ಜನರು ಪಾಲ್ಗೊಳ್ಳಲು ಅವಕಾಶವಿಲ್ಲ. ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು ಎಂದು ಹೇಳಿದರು.

**ಶೋಕಾಚರಣೆಯ ವರ್ಷ:** ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಾತನಾಡಿ, '2020 ಎಲ್ಲರ ಪಾಲಿಗೆ ಶೋಕಾಚರಣೆಯ ವರ್ಷವಾಗಿದೆ. ಅನೇಕರು ಕೋವಿಡ್‌ನಿಂದ ಕುಟುಂಬದ ಸದಸ್ಯರು, ಗೆಳೆಯರನ್ನು ಕಳೆದು ಕೊಂಡಿದ್ದಾರೆ. ಉದ್ಯೋಗ ನಷ್ಟವಾಗಿದೆ. ಇಂತಹ ಸ್ಥಿತಿಯಲ್ಲಿ ಹೊಸ ವರ್ಷಾಚರಣೆಯ ಅನಿವಾರ್ಯ ಏನಿದೆ' ಎಂದು ಪ್ರಶ್ನಿಸಿದರು.

Edit with WPS Office

ಪ್ರಜಾವಾಣಿ

# ಬಿಬಿಎಂಪಿ ಅಧಿಕಾರ ಕಸಿಯಲು ಹುನ್ನಾರ: ಎಎಪಿ ಆರೋಪ

ಬೆಂಗಳೂರು: ‘ರಾಜ್ಯ ಸರ್ಕಾರ ತಂದಿರುವ ಬಿಬಿಎಂಪಿ ಮಸೂದೆಯು ಮಹಾನಗರ ಪಾಲಿಕೆ ಹಾಗೂ ಸ್ಥಳೀಯಸಂಸ್ಥೆಗಳ ಅಧಿಕಾರವನ್ನು ಅಡಗಿಸುವ ಹಾಗೂ ನಿಧಾನಕ್ಕೆ ಕಸಿಯುವ ಹುನ್ನಾರದಿಂದ ಕೂಡಿದೆ’ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

‘ಅನೇಕ ದೇಶಗಳು ತಮ್ಮ ಬಜೆಟ್ಟಿನ ಶೇ 27 ರಷ್ಟು ಮೊತ್ತವನ್ನು ಮೀಸಲಿಟ್ಟು ಸ್ಥಳೀಯ ಸಂಸ್ಥೆಗಳ ಮೂಲಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತವೆ. ಆದರೆ, ಬಿಜೆಪಿ ಸರ್ಕಾರ ಸ್ಥಳೀಯ ಸಂಸ್ಥೆಗಳ ಅಧಿಕಾರ ಕಿತ್ತುಕೊಂಡು ಇಲ್ಲೂ ವ್ಯಾಪಕ ಲೂಟಿಗೆ ದಾರಿ ಮಾಡಿಕೊಟ್ಟಿದೆ’ ಎಂದು ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಪಾಲಿಕೆ ಸದಸ್ಯರ ಆಸ್ತಿ ವಿವರವನ್ನು ಮೇಯರ್‌ಗೆ ಸಲ್ಲಿಸಬೇಕು ಎಂದು ಹೇಳಿ ಸದಸ್ಯರನ್ನು ರಕ್ಷಿಸುವ ಹುನ್ನಾರ ನಡೆಸಲಾಗಿದೆ. ಲೋಕಾಯುಕ್ತ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಆಸ್ತಿ ವಿವರವನ್ನು ಪ್ರತಿವರ್ಷ ಕಡ್ಡಾಯವಾಗಿ ಸಲ್ಲಿಸದಿದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂಬ ಅಂಶವನ್ನು ಸೇರಿಸಬೇಕು’ ಎಂದರು.

Edit with WPS Office

ಕನ್ನಡಪ್ರಭ

# ಈ ಬಾರಿ ಹೊಸ ವರ್ಷ ಆಚರಣೆಗೆ ನಿಷೇಧ

## ಮನೆಯಲ್ಲಿ ಮಾತ್ರ ಆಚರಣೆ ಮಾಡೋದು ಉತ್ತಮ: ಆರ್.ಅಶೋಕ್

**ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಈ ಬಾರಿ ಹೊಸ ವರ್ಷಾಚರಣೆಗೆ ನಿಷೇಧ ಹೇರಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.



ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಂಗಳೂರು ನಗರದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ಸಾರ್ವಜನಿಕ ಸ್ಥಳದಲ್ಲಿ ಹೊಸ ವರ್ಷ ಆಚರಣೆಗೆ ಅವಕಾಶ ನೀಡದಿರುವುದಕ್ಕೆ ಚಿಂತನೆ ನಡೆಸಲಾಗುತ್ತಿದೆ. ಮನೆಯಲ್ಲಿ ಮಾತ್ರ ಹೊಸ ವರ್ಷ ಆಚರಣೆ ಮಾಡಿಕೊಳ್ಳುವುದು ಉತ್ತಮ. ಮನೆಯಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ಇದೆ. ಹೊಸ ವರ್ಷಾಚರಣೆ ಸಂಬಂಧ ಕೆಲವು ಷರತ್ತುಗಳನ್ನು ವಿಧಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಪ್ರಸ್ತಾವನೆ ಕಳುಹಿಸಿಕೊಡಲಾಗಿದೆ. ಅನುಮೋದನೆ ದೊರೆತ ಬಳಿಕ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಹೇಳಿದರು. ಹೋಟೆಲ್, ಪಬ್‌ಗಳಲ್ಲಿ ಶೇ.50ರಷ್ಟು ಗ್ರಾಹಕರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಅಲ್ಲದೇ, ಪಾಸ್ ಪಡೆದುಕೊಳ್ಳುವುದು ಕಡ್ಡಾಯ ಮಾಡಲಾಗುತ್ತದೆ. ಕೋವಿಡ್‌ನಿಂದಾಗಿ ಈ ಬಾರಿ ಹಲವು ಜನರನ್ನು ನಾವು ಕಳೆದುಕೊಂಡಿದ್ದೇವೆ. ತಾಯಿ, ತಂದೆ, ಕುಟುಂಬಸ್ಥರನ್ನು ಈ ಕಾರಣದಿಂದ ಕಳೆದುಕೊಂಡಿದ್ದೇವೆ. ಆದ್ದರಿಂದ ವರ್ಷಾಚರಣೆ ಮಾಡುವುದು ಬೇಡ. ಕೋವಿಡ್‌ನ ಎರಡನೇ ಅಲೆ ಹಿನ್ನೆಲೆ ಸಾರ್ವಜನಿಕ ಸಹಕಾರ ಅಗತ್ಯ ಇದ್ದು, ನಿಯಮ ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.



**ಹೊಸ ವರ್ಷದಲ್ಲಿ ಕೋಲಾಹಲಚರಣೆ ಮಾಡಬೇಕೆಂದೇನೋ ಹೊರಡು ಸಂಭ್ರಮಾಚರಣೆ ಅಲ್ಲ. ಕೋವಿಡ್‌ನಿಂದಾಗಿ ಅನೇಕರು ಜೀವ ಕಳೆದುಕೊಂಡಿದ್ದಾರೆ. ಮತ್ತೆ ಕೆಲವರು ಉದ್ಯೋಗ ಕಳೆದುಕೊಂಡಿದ್ದಾರೆ. ಭಾರತೀಯರಿಗೆ ಯುಗಾದಿ ಹೊಸ ವರ್ಷ.**

**• ಡಾ। ಕೆ.ಸುಧಾಕರ್**

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ.

ಕನ್ನಡಪ್ರಭ Sat, 12 December 2020
https://kpepaper.asianetnews.com/c/56958798

Edit with WPS Office

ಕನ್ನಡಪ್ರಭ



# ಪೌರ ಕಾರ್ಮಿಕರ ಪಿತಾಮಹ ಸಾಲಪ್ಪ ಜನ್ಮ ದಿನಾಚರಣೆ

**ಬೆಂಗಳೂರು:** ಪೌರ ಕಾರ್ಮಿಕರ ಪಿತಾಮಹ, ಮಾಜಿ ಶಾಸಕ ಐ.ಪಿ.ಡಿ ಸಾಲಪ್ಪ ಅವರ ಜನ್ಮದಿನದ ಅಂಗವಾಗಿ ಪಾಲಿಕೆ ಆಯುಕ್ತ ಮಂಜುನಾಥ್ ಪ್ರಸಾದ್ ಅವರು ಪಾಲಿಕೆ ಆವರಣದಲ್ಲಿ ಇರುವ ಸಾಲಪ್ಪ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಡಾ| ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಲಪ್ಪ ಅವರು ಪೌರಕಾರ್ಮಿಕ ಶ್ರೇಯೋಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರು ಪೌರ ಕಾರ್ಮಿಕರ ಪರವಾಗಿ ಕೈಗೊಂಡ ಕಾರ್ಯಗಳು ಎಂದಿಗೂ ಸ್ಮರಣೀಯ ಎಂದು ಸ್ಮರಿಸಿಕೊಂಡರು. ಕಾರ್ಯಕ್ರಮದಲ್ಲಿ ಬಿಬಿಎಂಪಿ ವಿಶೇಷ ಆಯುಕ್ತರಾದ ಜೆ.ಮಂಜುನಾಥ್, ರಂದೀಪ್, ಮನೋಜ್ ಜೈನ್, ಉಪ ಆಯುಕ್ತರಾದ ಲಿಂಗಮೂರ್ತಿ, ಹರೀಶ್ ನಾಯಕ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



Edit with WPS Office

VK
ವಿಜಯ ಕರ್ನಾಟಕ

# ಪಾಲಿಕೆ ಕಚೇರಿ ಎದುರು ಪ್ರತಿಭಟನೆ

**ಮಹದೇವಪುರ:** ಮಹದೇವಪುರ ಬಿಬಿಎಂಪಿ ಕಚೇರಿಯಲ್ಲಿ ಎಂಜಿನಿಯರ್‌ಗಳು ಅಭಿವೃದ್ಧಿ ಕಾಮಗಾರಿ ಗುತ್ತಿಗೆಯಲ್ಲಿ ಗೋಲ್‌ಮಾಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರರು ಶುಕ್ರವಾರ ಪ್ರತಿಭಟನೆ ನಡೆಸಿದರು.

''ವಿವಿಧ ಅನುದಾನದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಯನ್ನು ಪ್ಯಾಕೇಜ್ ಮಾಡಿ ಎಂಜಿನಿಯರ್‌ಗಳು ತಮಗೆ ಬೇಕಾದವರಿಗೆ, ಸಂಬಂಧಿಕರಿಗೆ ಶೇ. 12ರಷ್ಟು ಕಮಿಷನ್ ಪಡೆದು ಗುತ್ತಿಗೆ ನೀಡುತ್ತಿದ್ದಾರೆ,'' ಎಂದು ಗುತ್ತಿಗೆದಾರ ಪ್ರಕಾಶ್ ದೂರಿದರು.

''ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಬ್ಯಾಂಕ್‌ನಿಂದ ಎಫ್‌ಡಿಆರ್ ಪಡೆದು ಸಂಬಂಧಪಟ್ಟ ಅಧಿಕಾರಿಗಳಿಗೆ ಶುಕ್ರವಾರ ನೀಡಬೇಕಾಗಿತ್ತು. ಇದನ್ನು ಕೊಡಲು ಹೋದರೆ ಕಚೇರಿಯೇ ತೆರೆದಿರಲಿಲ್ಲ. ಉದ್ದೇಶಪೂರ್ವಕವಾಗಿ ಕಚೇರಿ ಬಂದ್ ಮಾಡಲಾಗಿತ್ತು,'' ಎಂದು ಅವರು ದೂರಿದರು.

Edit with WPS Office

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಿರ್ಧಾರ

# ಹೊಸ ವರ್ಷದ ಸಾರ್ವಜನಿಕ ಸಂಭ್ರಮಾಚರಣೆಗೆ ಸರಕಾರದ ಬ್ರೇಕ್

■ **ವಿಕ ಸುದ್ದಿಲೋಕ** ಬೆಂಗಳೂರು

ಹೊಸ ವರ್ಷಾಚರಣೆ ಪ್ರಯುಕ್ತ ಸಾರ್ವಜನಿಕವಾಗಿ ಕಾರ್ಯಕ್ರಮ ಆಯೋಜಿಸುವುದನ್ನು ನಿಷೇಧಿಸಲು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ''ಬೆಂಗಳೂರಿನಲ್ಲಿ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಷೇಧಿಸುವ ಕುರಿತು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ನಗರದ ಯಾವ ಪ್ರದೇಶಗಳಲ್ಲೂ ಜನರು ಸಮಾವೇಶಗೊಳ್ಳಲು ಅವಕಾಶ ನೀಡುವುದಿಲ್ಲ'' ಎಂದರು.

''ಡಿ.20ರಿಂದ ಜ.2ರವರೆಗೆ ಬಹಿರಂಗ ಕಾರ್ಯಕ್ರಮಗಳನ್ನು ನಿಷೇಧಿಸುವ ಕುರಿತು ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ಸದ್ಯವೇ ಉನ್ನತ ಸಭೆ ನಡೆಯಲಿದೆ. ರಾಜ್ಯಾದ್ಯಂತ ನಿರ್ಬಂಧ ಹೇರುವ ಕುರಿತು ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು'' ಎಂದು ಹೇಳಿದರು.

''ಜನರು ತಮ್ಮ ಮನೆಗಳಲ್ಲೇ ಹೊಸ ವರ್ಷಾಚರಣೆ ನಡೆಸಬಹುದು. ಯಾವುದೇ ರೀತಿಯ ಸಾರ್ವಜನಿಕ ಕಾರ್ಯಕ್ರಮಗಳಿಗೆ ಪರವಾನಗಿ ನೀಡದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಗಿದೆ. ಹೋಟೆಲ್, ಪಬ್, ರೆಸ್ಟೋರೆಂಟ್‌ಗಳಲ್ಲಿ ನೂರಾರು ಜನರು ಪಾಲ್ಗೊಳ್ಳುವುದಕ್ಕೆ ಅವಕಾಶವಿಲ್ಲ, ಸಾಮರ್ಥ್ಯದ ಶೇ.50ರಷ್ಟು ಜನರು ಮಾತ್ರ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು'' ಎಂದರು.

**ಶೋಕಾಚರಣೆ ವರ್ಷ:**
ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಾತನಾಡಿ, ''2020 ಎಲ್ಲರ ಪಾಲಿಗೆ ಶೋಕಾಚರಣೆಯ ವರ್ಷವಾಗಿದೆ. ಅನೇಕರು ಕೋವಿಡ್‌ನಿಂದ ಕುಟುಂಬ ಸದಸ್ಯರು ಹಾಗೂ ಗೆಳೆಯರನ್ನು ಕಳೆದುಕೊಂಡಿದ್ದಾರೆ. ಉದ್ಯೋಗ ನಷ್ಟವಾಗಿದೆ. ಇಂತಹ ಸ್ಥಿತಿಯಲ್ಲಿ ಹೊಸ ವರ್ಷಾಚರಣೆಯ ಅನಿವಾರ್ಯ ಏನಿದೆ?'' ಎಂದು ಪ್ರಶ್ನಿಸಿದರು.



**ನಗರದಲ್ಲೆಲ್ಲೂ ಜನರ ಸಮಾವೇಶಕ್ಕೆ ಅವಕಾಶ ಇಲ್ಲ**

**ಬಹಿರಂಗ ಕಾರ್ಯಕ್ರಮ ನಿಷೇಧಕ್ಕೆ ಸಿಎಂಗೆ ಪ್ರಸ್ತಾವ ಸಲ್ಲಿಕೆ**

Edit with WPS Office

ವಿಶ್ವವಾಣಿ

ವಿಶ್ವವಾಣಿ

# ರಸ್ತೆ ಅಭಿವೃದ್ಧಿ ಯೋಜನೆಗೆ ಚಾಲನೆ

**ಬೆಂಗಳೂರು:** ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಗರದ 12 ಅತಿ ಹೆಚ್ಚು ವಾಹನ ಸಂಚಾರ ದಟ್ಟಣೆ ಇರುವ ಸ್ಥಳಗಳನ್ನು ಉನ್ನತೀಕರಣ ಹಾಗೂ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಎಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ತಿಳಿಸಿದ್ದಾರೆ.

ಬಿಬಿಎಂಪಿ ಮತ್ತು ಕೆ.ಆರ್.ಡಿ.ಸಿ.ಎಲ್ ಅಧಿಕಾರಿಗಳು ಜಂಟಿ ಪರಿವೀಕ್ಷಣೆ ನಡೆಸಿ ಬೆಂಗಳೂರು ಸಂಚಾರ ಪೊಲೀಸ್ ನಿರ್ದೇಶನದ ಮೇರೆಗೆ ಆರಂಭಿಕ ಹಂತದ ಸುಧಾರಣೆ ಕೈಗೊಂಡು ಹಾಗೂ 5 ವರ್ಷಗಳ ನಿರ್ವಹಣೆ ಮಾಡಲು ರಸ್ತೆಗಳನ್ನು ಆಯ್ಕೆ ಮಾಡಲಾಗಿದೆ.

ಬಳ್ಳಾರಿ ರಸ್ತೆಯಿಂದ ಹೆಬ್ಬಾಳ, ಹಳೆಯ ಮದ್ರಾಸ್ ರಸ್ತೆಯಿಂದ ಕೆ.ಆರ್. ಪುರ ರಾಷ್ಟ್ರೀಯ ಹೆದ್ದಾರಿ, ಕೆ.ಆರ್. ಪುರ ರೈಲ್ವೆ ನಿಲ್ದಾಣದಿಂದ ವೈಟ್‌ಫೀಲ್ಡ್‌ನ ಹೋಪ್‌ಫಾರಂ, ಹಳೆ ವಿಮಾನ ನಿಲ್ದಾಣ ವೈಟ್‌ಫೀಲ್ಡ್‌ನ ಹೋಪ್‌ಫಾರಂ, ಸರ್ಜಾಪುರ ರಸ್ತೆಯಿಂದ ಇಬ್ಬಲೂರು, ಹೊಸೂರು ರಸ್ತೆಯಿಂದ ಸಿಲ್ಕ್‌ಬೋರ್ಡ್, ಬನ್ನೇರುಘಟ್ಟ ರಸ್ತೆ ಕೋಳಿ ಫಾರಂ, ಕನಕಪುರ ರಸ್ತೆ ಕೋಣನ ಕುಂಟೆ ಕ್ರಾಸ್, ಮೈಸೂರು ರಸ್ತೆಯಿಂದ ನೈಸ್ ರಸ್ತೆ, ಮಾಗಡಿ ರಸ್ತೆಯಿಂದ ಸುಂಕದಕಟ್ಟೆ, ತುಮಕೂರು ರಸ್ತೆಯಿಂದ ಗೊರಗುಂಟೆ ಪಾಳ್ಯ, ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ ಮೈಸೂರು ರಸ್ತೆ , ಮೈಸೂರು ರಸ್ತೆಯಿಂದ ತುಮಕೂರು ರಸ್ತೆ, ಕೆ.ಆರ್.ಪುರದಿಂದ ಸಿಲ್ಕ್ ಬೋರ್ಡ್ (ಲೋರಿ ಜಂಕ್ಷನ್‌ನಿಂದ ಆಗರ ಮಾರ್ಗವಾಗಿ ಸಿಲ್ಕ್ ಬೋರ್ಡ್‌ವರೆಗೆ), ಸಿಲ್ಕ್ ಬೋರ್ಡ್‌ನಿಂದ ಮೈಸೂರು ರಸ್ತೆ (ಸಿಲ್ಕ್ ಬೋರ್ಡ್‌ನಿಂದ ಜಯದೇವ ಜಂಕ್ಷನ್, ಜೆಡಿಮರ, ಸಾರಕ್ಕಿ ಮಾರ್ಗವಾಗಿ ನಾಯಂಡಹಳ್ಳಿವರೆಗೆ) ರಸ್ತೆಗಳನ್ನು ಗುರುತಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ 12 ಕಾರಿಡಾರ್‌ಗಳಿಗೆ ಆರಂಭಿಕ ಹಂತದ ಅಭಿವೃದ್ಧಿಗಾಗಿ ತಗಲುವ ಒಟ್ಟು ಮೊತ್ತ 335.17 ಕೋಟಿ ರು. ಗಳು ಹಾಗೂ ವಾರ್ಷಿಕ ನಿರ್ವಹಣಾ ಮೊತ್ತ 142.12 ಕೋಟಿ ರು. ಉನ್ನತೀಕರಣ ಕಾರ್ಯ ಮತ್ತು ಒಂದು ವರ್ಷದ ವಾರ್ಷಿಕ ನಿರ್ವಹಣಾ ಕಾರ್ಯಕ್ಕೆ ಒಟ್ಟಾರೆ ಮೊತ್ತ 477.29 ಕೋಟಿ ರು. ಗಳಾಗುತ್ತದೆ ಎಂದು ತಿಳಿಸಿದ್ದಾರೆ.

Edit with WPS Office

ಸಂಯುಕ್ತ ಕರ್ನಾಟಕ

# ಹನ್ನೆರಡು ರಸ್ತೆಗಳ ಉನ್ನತೀಕರಣಕ್ಕೆ ಚಾಲನೆ

ಸಂ.ಕ.ಸಮಾಚಾರ ಬೆಂಗಳೂರು

ಬೆಂಗಳೂರು ನಗರದ 12 ಅತಿ ಹೆಚ್ಚು ವಾಹನ ಸಂಚಾರ ದಟ್ಟಣೆ ಇರುವ ಸ್ಥಳಗಳನ್ನು ಉನ್ನತೀಕರಣ ಹಾಗೂ ನಿರ್ವಹಣೆ ಕಾರ್ಯವನ್ನು ಕೆಆರ್‌ಡಿಸಿಎಲ್ ಸಂಸ್ಥೆಯ ವತಿಯಿಂದ ಕೈಗೊಳ್ಳಲಾಗುತ್ತಿದೆ

ಈ ಕುರಿತು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಮಾಹಿತಿ ನೀಡಿದ್ದು, ಬಿಬಿಎಂಪಿ ಮತ್ತು ಕೆ.ಆರ್.ಡಿ.ಸಿ.ಎಲ್ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ ಬೆಂಗಳೂರು ಸಂಚಾರ ಪೊಲೀಸರ ನಿರ್ದೇಶನದ ಮೇರೆಗೆ ಪ್ರಾರಂಭಿಕ ಹಂತದ ಸುಧಾರಣೆ ಕೈಗೊಂಡು ಹಾಗೂ 5 ವರ್ಷಗಳ ನಿರ್ವಹಣೆ ಮಾಡಲು ರಸ್ತೆಗಳನ್ನು ಆಯ್ಕೆ ಮಾಡಲಾಗಿದೆ.

ಬಳ್ಳಾರಿ ರಸ್ತೆ (ಚಾಲುಕ್ಯ ಸರ್ಕಲ್‌ನಿಂದ ಮೇಖ್ರಿ ಸರ್ಕಲ್ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ಪರಿಮಿತಿಯಲ್ಲಿ ಹೆಬ್ಬಾಳದವರೆಗೆ) ಹಳೆಯ ಮದ್ರಾಸ್ ರಸ್ತೆ (ಟ್ರಿನಿಟಿ ಸರ್ಕಲ್‌ನಿಂದ ಇಂದಿರಾನಗರದ ಮಾರ್ಗವಾಗಿ, ಕೆ.ಆರ್.ಪುರ ರಾಷ್ಟ್ರೀಯ ಹೆದ್ದಾರಿ ಕೇಬಲ್ ಸ್ಟೇ ಸೇತುವೆವರೆಗೆ) ಕೆ.ಆರ್.ಪುರ ರೈಲ್ವೆ ನಿಲ್ದಾಣದಿಂದ ಹೂಡಿ ಮಾರ್ಗವಾಗಿ ವೈಟ್‌ಫೀಲ್ಡ್‌ನ ಹೋಪ್ ಫಾರಂವರೆಗೆ), ಹಳೆ ವಿಮಾನನಿಲ್ದಾಣ (ಎಎಸ್‌ಸಿ ಕೇಂದ್ರದಿಂದ ಎಚ್‌ಎಎಲ್ ಮಾರ್ಗವಾಗಿ ಕಾಡುಗೋಡಿ, ವೈಟ್‌ಫೀಲ್ಡ್‌ನಹೋಪ್‌ಫಾರಂವರೆಗೆ). ಸರ್ಜಾಪುರ ರಸ್ತೆ (ಹೊಸೂರು ರಸ್ತೆಯಿಂದ ಜಕ್ಕಸಂದ್ರ ಮಾರ್ಗವಾಗಿ ಕಾರ್ಮೆಲಾರಾಮ್ ಸೇತುವೆ ಬುಟ್ಟಿರುವರೆಗೆ), ಹೊಸೂರು ರಸ್ತೆ (ವೆಲ್ಲಾರಾ ಜಂಕ್ಷನ್‌ನಿಂದ ಮಡಿವಾಳ ಮಾರ್ಗವಾಗಿ ಸಿಲ್ಕ್‌ಬೋರ್ಡ್‌ವರೆಗೆ). ಬನ್ನೇರುಘಟ್ಟ ರಸ್ತೆ (ಹೊಸೂರು ರಸ್ತೆಯಿಂದ ಮಾರ್ಗವಾಗಿ ಜಯದೇವ, ಜಾಕಿಮರ, ಕೋಳಿಫಾರಂ ಬನ್ನೇರುಘಟ್ಟವರೆಗೆ). ಕನಕಪುರ ರಸ್ತೆ ( ಕೆ.ಆರ್.ರಸ್ತೆಯಿಂದ ನೈಸ್‌ರಸ್ತೆ ಮಾರ್ಗವಾಗಿ ಬನಶಂಕರಿ, ಕೋಣನಕುಂಟೆ ಕ್ರಾಸ್‌ವರೆಗೆ) ಮೈಸೂರು ರಸ್ತೆ (ಹಡ್ಸನ್ ವೃತ್ತದಿಂದ ಸಿರ್ಸಿ ಮೇಲ್ಸೇತುವೆ, ನಾಯಂಡನಹಳ್ಳಿ, ಜ್ಞಾನಭಾರತಿ ಜಂಕ್ಷನ್ ಮಾರ್ಗವಾಗಿ ನೈಸ್ ರಸ್ತೆವರೆಗೆ), ಮಾಗಡಿ ರಸ್ತೆ (ಹಳೆಯ ಬಿನ್ನಿಮಿಲ್‌ನಿಂದ



12 ಕಾರಿಡಾರ್‌ಗಳಿಗೆ ಪ್ರಾರಂಭಿಕ ಹಂತದ ಅಭಿವೃದ್ಧಿಗಾಗಿ 335.17 ಕೋಟಿ ರೂ. ವೆಚ್ಚವಾಗಲಿದೆ. ವಾರ್ಷಿಕ ನಿರ್ವಹಣಾ ಮೊತ್ತ ರೂ.142.12 ಕೋಟಿಗಳು. ಉನ್ನತೀಕರಣ ಕಾರ್ಯ ಮತ್ತು ಐದು ವರ್ಷದ ವಾರ್ಷಿಕ ನಿರ್ವಹಣಾ ಕಾರ್ಯಕ್ಕೆ ಒಟ್ಟಾರೆ ಮೊತ್ತ ರೂ.477.29 ಕೋಟಿಗಳಾಗುತ್ತದೆ.

ಟೋಲ್‌ಗೇಟ್, ಶ್ರೀ ಮುನಿರಾವ್ ವೃತ್ತ, ಸುಮನಹಳ್ಳಿ, ಸುಂಕದಕಟ್ಟೆ ಮಾರ್ಗವಾಗಿ ನೈಸ್ ರಸ್ತೆವರೆಗೆ), ತುಮಕೂರು ರಸ್ತೆ (ಸಂಗೊಳ್ಳಿ ರಾಯಣ್ಣ ವೃತ್ತದಿಂದ ನವರಂಗ ಸರ್ಕಲ್ ಮಾರ್ಗವಾಗಿ ತುಮಕೂರು ರಸ್ತೆ, ಗೊರಗುಂಟೆಪಾಳ್ಯವರೆಗೆ), ವೆಸ್ಟ್ ಆಫ್ ಕಾರ್ಡ್ ರಸ್ತೆ (ಸ್ಯಾಂಡಲ್ ಸೋಪ್ ಕಾರ್ಖಾನೆಯಿಂದ ಟೋಲ್‌ಗೇಟ್ ಅಂಡರ್‌ಪಾಸ್ ಮಾರ್ಗವಾಗಿ ಮೈಸೂರು ರಸ್ತೆವರೆಗೆ). ಮೈಸೂರು ರಸ್ತೆಯಿಂದ ತುಮಕೂರು ರಸ್ತೆ (ನಾಯಂಡನಹಳ್ಳಿಯಿಂದ ಸುಮನಹಳ್ಳಿ ಜಂಕ್ಷನ್ ಮಾರ್ಗವಾಗಿ ಗೊರಗುಂಟೆಪಾಳ್ಯವರೆಗೆ), ತುಮಕೂರು ರಸ್ತೆಯಿಂದ ಕೆ.ಆರ್.ಪುರ (ಗೊರಗುಂಟೆಪಾಳ್ಯದಿಂದ ಬಿಇಎಲ್ ವೃತ್ತ, ಹೆಬ್ಬಾಳ ಜಂಕ್ಷನ್, ನಾಗವಾರ ಮಾರ್ಗವಾಗಿ ಹಳೆಯ ಮದ್ರಾಸ್ ರಸ್ತೆವರೆಗೆ), ಕೆ.ಆರ್.ಪುರದಿಂದ ಸಿಲ್ಕ್ ಬೋರ್ಡ್ (ಟೋರಿ ಜಂಕ್ಷನ್‌ನಿಂದ ಅಗರ ಮಾರ್ಗವಾಗಿ ಸಿಲ್ಕ್ ಬೋರ್ಡ್‌ವರೆಗೆ). ಸಿಲ್ಕ್ ಬೋರ್ಡ್‌ನಿಂದ ಮೈಸೂರು ರಸ್ತೆ (ಸಿಲ್ಕ್ ಬೋರ್ಡ್‌ನಿಂದ ಜಯದೇವ ಜಂಕ್ಷನ್, ಜಾಕಿಮರ, ಸಾರಕ್ಕಿ ಮಾರ್ಗವಾಗಿ ನಾಯಂಡನಹಳ್ಳಿವರೆಗೆ).



Edit with WPS Office

ಸಂಯುಕ್ತ ಕರ್ನಾಟಕ

# ಪೌರಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಅವಶ್ಯ

ಸಂ.ಕ.ಸಮಾಚಾರ ಬೆಂಗಳೂರು

ಪೌರಕಾರ್ಮಿಕರು ಅವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವ ಮೂಲಕ ಮಕ್ಕಳು ಪೌರಕಾರ್ಮಿಕರಾಗದಂತೆ ಕಾಳಜಿ ವಹಿಸಬೇಕೆಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದರು.

ಪೌರಕಾರ್ಮಿಕರ ಪಿತಾಮಹ ಐ.ಪಿ.ಡಿ ಸಾಲಪ್ಪ ಅವರ ಜನ್ಮದಿನಾಚರಣೆಯ ಅಂಗವಾಗಿ ಬಿಬಿಎಂಪಿಯಿಂದ ಪಾಲಿಕೆಯ ಕೇಂದ್ರ ಕಚೇರಿಯ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಲಪ್ಪ ಅವರು ಪೌರಕಾರ್ಮಿಕರ ಜೀವನ ಸುಧಾರಿಸುವ ನಿಟ್ಟಿನಲ್ಲಿ ಶ್ರಮ ವಹಿಸಿದ್ದರು. ಅವರು ಕನಸು ಈಡೇರಬೇಕಾದರೆ ಎಲ್ಲ ಪೌರಕಾರ್ಮಿಕರು ಅವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕು. ಮನೆಯಲ್ಲಿ ಶಿಕ್ಷಣ ನೀಡುವುದಕ್ಕೆ ಪೂರಕವಾದ ವಾತಾವರಣ ಇಲ್ಲದೆ ಇದ್ದರೆ ವಸತಿ ನಿಲಯಗಳಿಗೆ ಸೇರಿಸಿ, ನಾನು ಸಹ ವಸತಿ ನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ್ದೆ ಎಂದು ಸ್ಮರಿಸಿದರು.



ಪೌರಕಾರ್ಮಿಕರು ಅವರ ಮಕ್ಕಳು ಸಹ ಪೌರಕಾರ್ಮಿಕರಾಗದಂತೆ ಎಚ್ಚರಿಕೆ ವಹಿಸಬೇಕು. ಮುಂಬರುವ ದಿನಗಳಲ್ಲಿ ಪೌರಕಾರ್ಮಿಕರು ಸಿಗದೆ ಕೇವಲ ಯಂತ್ರಗಳ ಮೂಲಕ ಕಸ ವಿಲೇವಾರಿ ಹಾಗೂ ನಿರ್ವಹಣೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಆಗ ಐ.ಪಿ.ಡಿ ಸಾಲಪ್ಪ ಅವರ ಶ್ರಮ ಸಾರ್ಥಕವಾಗಲಿದೆ. ಆ ಮೂಲಕ ಅವರ ಕನಸು ಈಡೇರಲಿದೆ ಎಂದರು.



Edit with WPS Office

ಸಂಯುಕ್ತ ಕರ್ನಾಟಕ

# ರಾಜ್ಯದಾದ್ಯಂತ ನೂತನ ವರ್ಷಾಚರಣೆಗೆ ನಿರ್ಬಂಧ

**ಸಂ.ಕ.ಸಮಾಚಾರ ಬೆಂಗಳೂರು**

ಮಹತ್ವದ ಬೆಳವಣಿಗೆಯೊಂದರಲ್ಲಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಮಹಾನಗರಗಳ ಸಾರ್ವಜನಿಕ ಸ್ಥಳಗಳಲ್ಲಿ ಈ ಬಾರಿ ಹೊಸ ವರ್ಷಾಚರಣೆಗೆ ರಾಜ್ಯ ಸರ್ಕಾರ ನಿಷೇಧ ಹೇರುವ ನಿರ್ಧಾರ ಕೈಗೊಂಡಿದೆ.

ವಿಧಾನಸೌಧದಲ್ಲಿ ಈ ಕುರಿತು ಮಾಹಿತಿ ನೀಡಿದ ಕಂದಾಯ ಸಚಿವ ಆರ್. ಅಶೋಕ್, ಈ ಬಾರಿ ಬೆಂಗಳೂರು ಮಹಾನಗರದ ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆ ಮಾಡುವಂತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



- ಹೋಟೆಲ್‌ಗಳಿಗೆ ಷರತ್ತಿನ ಅನುಮತಿ
- ಕೋವಿಡ್ ನಿಯಮ ಪಾಲನೆ ಕಡ್ಡಾಯ

ಹೊಸ ವರ್ಷ ಆಚರಣೆ ಬೆಂಗಳೂರು ನಗರದ ಎಂಜಿ ರೋಡ್, ಬ್ರಿಗೇಡ್ ರೋಡ್ ಸೇರಿದಂತೆ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಮಾಡುವ ಹಾಗಿಲ್ಲ. ಮನೆಯಲ್ಲಿ ಮಾತ್ರ ಹೊಸ ವರ್ಷ ಆಚರಣೆಗೆ ಅವಕಾಶ ಎಂದು ಆರ್. ಅಶೋಕ್ ಸ್ಪಷ್ಟಪಡಿಸಿದ್ದಾರೆ.

ಇನ್ನು ಅಲ್ಲದೇ ಹೋಟೆಲ್ ಹಾಗೂ ಪಬ್‌ಗಳಲ್ಲಿ ಶೇ.50ರಷ್ಟು ಗ್ರಾಹಕರಿಗೆ ಮಾತ್ರ ಅವಕಾಶ ನೀಡಲಾಗಿದ್ದು, ಅದರಲ್ಲೂ ಪಾಸ್ ಪಡೆದುಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ. ಈ ಕುರಿತು ಸಿಎಂ ಯಡಿಯೂರಪ್ಪ ಅವರಿಗೆ ಪ್ರಸ್ತಾವನೆ ಕಳುಹಿಸಲಾಗಿದ್ದು, ಅವರು ಅನುಮೋದನೆ ಕೊಟ್ಟ ಬಳಿಕ ನಿಯಮ ಜಾರಿಗೊಳಿಸಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

ಕೋವಿಡ್ 2ನೇ ಅಲೆ ಕಾರಣ ಸಾರ್ವಜನಿಕರ ಸಹಕಾರ ಅಗತ್ಯವಿದ್ದು, ಪೊಲೀಸ್ ಇಲಾಖೆಗೆ ಈಗಾಗಲೇ ನಿರ್ದೇಶನ ನೀಡಿದ್ದೇವೆ. ಈ ನಿಯಮ ಉಲ್ಲಂಘನೆ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದೂ ಸಚಿವರು ಎಚ್ಚರಿಸಿದರು.

ಈ ವರ್ಷ ಮನೆಯಲ್ಲೇ ಕುಟುಂಬ ಸದಸ್ಯರು, ಸ್ನೇಹಿತರು ಒಂದೆಡೆ ಸೇರಿ ಕೋವಿಡ್ ನಿಯಮ ಪಾಲಿಸಿಕೊಂಡೇ ಹೊಸ ವರ್ಷ ಆಚರಿಸೋಣ.

ಕೊರೊನಾದಿಂದ ಹಲವು ಆಪ್ತರನ್ನು ಕಳೆದುಕೊಂಡಿದ್ದೇವೆ. ಹಾಗಾಗಿ ಸಾರ್ವಜನಿಕವಾಗಿ ಹೊಸ ವರ್ಷಾಚರಣೆ ಬೇಡ ಎಂದು ಆರ್. ಅಶೋಕ್ ಮನವಿ ಮಾಡಿದರು.



Edit with WPS Office

ಹೊಸ ದಿಗಂತ

# ಕೌನ್ಸಿಲ್ ಸಭಾಂಗಣದ ಆಸನ ಸಾಮರ್ಥ್ಯ ಹೆಚ್ಚಳ?

ದಿಗಂತ ವಿಶೇಷ

ಬೆಂಗಳೂರು:



## ಮರು ವಿನ್ಯಾಸಕ್ಕೆ ನೀಲಿ ನಕ್ಷೆ

■ ಮಂಜುನಾಥ್ ಪ್ರಸಾದ್, ಬಿಬಿಎಂಪಿ ಆಯುಕ್ತ

Edit with WPS Office

ಹೊಸ ದಿಗಂತ

# ನೂತನ ವರ್ಷಾಚರಣೆಗೆ ನಿಷೇಧ

**ಬೆಂಗಳೂರು:** [illegible]

### ಶೋಕವಿದೆ, ಸಂಭ್ರಮವಲ್ಲ



[illegible]

Edit with WPS Office

ಹೊಸ ದಿಗಂತ

## ಮಕ್ಕಳನ್ನು ಕಾರ್ಮಿಕರನ್ನಾಗಿಸಬೇಡಿ



Edit with WPS Office

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಸ್ತೆ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

ಬೆಂಗಳೂರು, ಡಿ. 11: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ಬೆಂಗಳೂರು ನಗರದ 12 ಅತಿಹೆಚ್ಚು ವಾಹನ ಸಂಚಾರ ದಟ್ಟಣೆ ಇರುವ ಸ್ಥಳಗಳನ್ನು ಉನ್ನತೀಕರಣ ಹಾಗೂ ನಿರ್ವಹಣೆ ಕಾರ್ಯವನ್ನು ಕೆಆರ್‌ಡಿಸಿಎಲ್ ಸಂಸ್ಥೆಯ ವತಿಯಿಂದ ಕೈಗೊಳ್ಳಲಾಗುತ್ತಿದೆ ಎಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಬಿಬಿಎಂಪಿ ಮತ್ತು ಕೆಆರ್‌ಡಿಸಿಎಲ್ ಅಧಿಕಾರಿಗಳು ಜಂಟಿ ಪರಿವೀಕ್ಷಣೆ ನಡೆಸಿ ಬೆಂಗಳೂರು ಸಂಚಾರ ಪೊಲೀಸ್ ನಿರ್ದೇಶನದ ಮೇರೆಗೆ ಪ್ರಾರಂಭಿಕ ಹಂತದ ಸುಧಾರಣೆ ಕೈಗೊಂಡು ಹಾಗೂ 5 ವರ್ಷಗಳ ನಿರ್ವಹಣೆ ಮಾಡಲು ರಸ್ತೆಗಳನ್ನು ಆಯ್ಕೆ ಮಾಡಲಾಗಿದೆ. ಬಳ್ಳಾರಿ ರಸ್ತೆ (ಚಾಲುಕ್ಯ ಸರ್ಕಲ್‌ನಿಂದ ಮೇಖ್ರಿ ಸರ್ಕಲ್ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ಪರಿಮಿತಿಯಲ್ಲಿ ಹೆಬ್ಬಾಳದ ವರೆಗೆ) ಹಳೆಯ ಮದ್ರಾಸ್ ರಸ್ತೆ, (ಟ್ರಿನಿಟಿ ಸರ್ಕಲ್‌ನಿಂದ ಇಂದಿರಾ ನಗರದ ಮಾರ್ಗವಾಗಿ, ಕೆ.ಆರ್.ಪುರಂ ರಾಷ್ಟ್ರೀಯ ಹೆದ್ದಾರಿ ಕೇಬಲ್ ಸ್ಟೇ ಸೇತುವೆ ವರೆಗೆ).

ಕೆ.ಆರ್.ಪುರಂ ರೈಲ್ವೇ ನಿಲ್ದಾಣದಿಂದ ಹೂಡಿ ಮಾರ್ಗವಾಗಿ ವೈಟ್‌ಫೀಲ್ಡ್‌ನ ಹೋಪ್‌ಫಾರಂವರೆಗೆ), ಹಳೆ ವಿಮಾನ ನಿಲ್ದಾಣ (ಎಎಸ್‌ಸಿ ಕೇಂದ್ರದಿಂದ ಎಚ್‌ಎಎಲ್ ಮಾರ್ಗವಾಗಿ ಕಾಡುಗೋಡಿ, ವೈಟ್‌ಫೀಲ್ಡ್‌ನ ಹೋಪ್‌ಫಾರಂವರೆಗೆ), ಸರ್ಜಾಪುರ ರಸ್ತೆ (ಹೊಸೂರು ರಸ್ತೆಯಿಂದ ಚಿಕ್ಕಸಂದ್ರ ಮಾರ್ಗವಾಗಿ ಕಾರ್ಮೆಲಾರಾಮ್ ಸೇತುವೆ ಇಬ್ಬಲೂರು ವರೆಗೆ), ಹೊಸೂರು ರಸ್ತೆ (ವೆಲ್ಲಾರಾ ಜಂಕ್ಷನ್‌ನಿಂದ ಮಡಿವಾಳ ಮಾರ್ಗವಾಗಿ ಸಿಲ್ಕ್ ಬೋರ್ಡ್‌ವರೆಗೆ), ಬನ್ನೇರುಘಟ್ಟ ರಸ್ತೆ (ಹೊಸೂರು ರಸ್ತೆಯಿಂದ ಮಾರ್ಗವಾಗಿ ಜಯದೇವ, ಜೇಡಿಮರ, ಕೋಳಿಫಾರಂ ಬನ್ನೇರುಘಟ್ಟ ವರೆಗೆ), ಕನಕಪುರ ರಸ್ತೆ (ಕೆ.ಆರ್.ರಸ್ತೆಯಿಂದ ರಿಂಗ್ ರಸ್ತೆ ಮಾರ್ಗವಾಗಿ ಬನಶಂಕರಿ, ಕೋಣನಕುಂಟೆ ಕ್ರಾಸ್‌ವರೆಗೆ) ಮೈಸೂರು ರಸ್ತೆ (ಹಡ್ಸನ್ ವೃತ್ತದಿಂದ ಸಿರ್ಸಿ ಮೇಲ್ಸೇತುವೆ, ನಾಯಂಡಹಳ್ಳಿ, ಜ್ಞಾನಭಾರತಿ ಜಂಕ್ಷನ್ ಮಾರ್ಗವಾಗಿ ರಿಂಗ್ ರಸ್ತೆ ವರೆಗೆ), ಮಾಗಡಿ ರಸ್ತೆ (ಹಳೆಯ ಬಿನ್ನಿಮಿಲ್ ನಿಂದ ಟೋಲ್‌ಗೇಟ್, ಡಿ ಮುನಿರಾಜ್ ವೃತ್ತ, ಸುಮನಹಳ್ಳಿ, ಸುಂಕದಕಟ್ಟೆ ಮಾರ್ಗವಾಗಿ ರಿಂಗ್ ರಸ್ತೆವರೆಗೆ).

ತುಮಕೂರು ರಸ್ತೆ (ಸಂಗೊಳ್ಳಿ ರಾಯಣ್ಣ ವೃತ್ತದಿಂದ ನವರಂಗ ಸರ್ಕಲ್ ಮಾರ್ಗವಾಗಿ ತುಮಕೂರು ರಸ್ತೆ, ಗೊರಗುಂಟೆ ಪಾಳ್ಯವರೆಗೆ), ವೆಸ್ಟ್ ಆಫ್ ಕಾರ್ಡ್ ರಸ್ತೆ (ಸ್ಯಾಂಡಲ್ ಸೋಪ್ ಕಾರ್ಖಾನೆಯಿಂದ ಟೋಲ್ ಗೇಟ್ ಅಂಡರ್‌ಪಾಸ್ ಮಾರ್ಗವಾಗಿ ಮೈಸೂರು ರಸ್ತೆವರೆಗೆ), ಮೈಸೂರು ರಸ್ತೆಯಿಂದ ತುಮಕೂರು ರಸ್ತೆ(ನಾಯಂಡಹಳ್ಳಿಯಿಂದ ಸುಮನಹಳ್ಳಿ ಜಂಕ್ಷನ್ ಮಾರ್ಗವಾಗಿ ಗೊರಗುಂಟೆಪಾಳ್ಯವರೆಗೆ), ತುಮಕೂರು ರಸ್ತೆಯಿಂದ ಕೆ.ಆರ್.ಪುರಂ (ಗೊರಗುಂಟೆಪಾಳ್ಯದಿಂದ ಬಿಇಎಲ್ ವೃತ್ತ, ಹೆಬ್ಬಾಳ ಜಂಕ್ಷನ್, ನಾಗವಾರ ಮಾರ್ಗವಾಗಿ ಹಳೆಯ ಮದ್ರಾಸ್ ರಸ್ತೆವರೆಗೆ), ಕೆ.ಆರ್. ಪುರಂನಿಂದ ಸಿಲ್ಕ್ ಬೋರ್ಡ್ ([illegible] ಜಂಕ್ಷನ್‌ನಿಂದ ಅಗರ ಮಾರ್ಗವಾಗಿ ಸಿಲ್ಕ್ ಬೋರ್ಡ್‌ವರೆಗೆ), ಸಿಲ್ಕ್ ಬೋರ್ಡ್‌ನಿಂದ ಮೈಸೂರು ರಸ್ತೆ (ಸಿಲ್ಕ್ ಬೋರ್ಡ್ ನಿಂದ ಜಯದೇವ ಜಂಕ್ಷನ್, ಜೇಡಿಮರ, ಸಾರಕ್ಕಿ ಮಾರ್ಗವಾಗಿ ನಾಯಂಡಹಳ್ಳಿ ವರೆಗೆ).

ಬೆಂಗಳೂರು ಮಹಾನಗರ ವ್ಯಾಪ್ತಿಯ ಎಲ್ಲ 12 ಕಾರಿಡಾರ್‌ಗಳಿಗೆ ಪ್ರಾರಂಭಿಕ ಹಂತದ ಅಭಿವೃದ್ಧಿಗಾಗಿ ತಗಲುವ ಒಟ್ಟು ಮೊತ್ತ 335.17ಕೋಟಿ ರೂ. ಹಾಗೂ ವಾರ್ಷಿಕ ನಿರ್ವಹಣಾ ಮೊತ್ತ 142.12ಕೋಟಿ ರೂ. ಗಳು. ಉನ್ನತೀಕರಣ ಕಾರ್ಯ ಮತ್ತು ಒಂದು ವರ್ಷದ ವಾರ್ಷಿಕ ನಿರ್ವಹಣಾ ಕಾರ್ಯಕ್ಕೆ ಒಟ್ಟಾರೆ ಮೊತ್ತ 477.29 ಕೋಟಿ ರೂ.ಗಳಾಗುತ್ತದೆ. ಅದರಂತೆ ಅತಿ ಹೆಚ್ಚು ವಾಹನ ಸಂಚಾರ ದಟ್ಟಣೆ ಇರುವ ರಸ್ತೆಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Bengaluru Edition
Dec 12, 2020 Page No.3

Edit with WPS Office